# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

**ಮಾನಸಗಂಗೋತ್ರಿ, ಮೈಸೂರು – 570 006**

**ದೂರವಾಣಿ :0821–2419318/386/429** **e-mail : dswuommgm@gmail.com**


ಸಂಖ್ಯೆ:ವಿಕ್ಷೇಪಾ.9/ 461 /2017–18 ದಿನಾಂಕ: 08/06/2018

**ಸುತ್ತೋಲೆ**

ವಿಷಯ: 2018–19ನೇ ಶೈಕ್ಷಣಿಕ ಸಾಲಿನ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018–19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಬಯಸುವ ಅರ್ಹ ವಿದ್ಯಾರ್ಥಿಗಳು ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕಾಗಿ ತಿಳಿಸಲಾಗಿದೆ.

| ಕ್ರಮ ಸಂಖ್ಯೆ | ಪ್ರವೇಶಾತಿ ಪ್ರಕ್ರಿಯೆಯ ವಿವರ | ದಿನಾಂಕ |
|---|---|---|
| 1. | ಅರ್ಜಿ ವಿತರಣೆ (1, 3 ಮತ್ತು 5ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಮಾತ್ರ) | 18–06–2018 ರಿಂದ 23–06–2018 |
| 2. | ಅರ್ಜಿ ಸ್ವೀಕರಿಸುವ ಕೊನೆಯ ದಿನ | 25–06–2018 |
| 3. | 3 ಮತ್ತು 5ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಪ್ರವೇಶಾತಿ | 29–06–2018 ರಿಂದ 30–06–2018 |
| 4. | ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿ | 02–07–2018 ರಿಂದ 07–07–2018 |

**ಸೂಚನೆ:**
1. ಸ್ನಾತಕಪೂರ್ವ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ಬಯಸುವವರಿಗೆ ಅರ್ಜಿಗಳನ್ನು ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಪಡೆಯಲು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಿಳಿಸುವುದು.
2. ಸ್ನಾತಕಪೂರ್ವ ಪುರುಷರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ಬಯಸುವವರಿಗೆ ಅರ್ಜಿಗಳನ್ನು ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ಪಡೆಯಲು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಿಳಿಸುವುದು.

08/06/2018.

ನಿರ್ದೇಶಕ

DIRECTOR OF STUDENT WELFARE
UNIVERSITY OF MYSORE, MYSURU

ಮೈಸೂರು ವಿಶ್ವವಿದ್ಯಾನಿಲಯ
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮಾನಸಗಂಗೋತ್ರಿ, ಮೈಸೂರು – 570 006

ದೂರವಾಣಿ :0821–2419318/386/429 e-mail : dswuommgm@gmail.com

ಸಂಖ್ಯೆ:ವಿಕ್ಷೇಪಾ.9/688(b)/2017–18 ದಿನಾಂಕ: 13/06/2018

## ಸುತ್ತೋಲೆ

**ವಿಷಯ:** 2018–19ನೇ ಶೈಕ್ಷಣಿಕ ಸಾಲಿನ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಾತಿಯನ್ನು ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2018–19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿಯನ್ನು ಬಯಸುವ ವಿಶ್ವವಿದ್ಯಾನಿಲಯದ ಅಂಗ ಕಾಲೇಜುಗಳ (ವಿ.ವಿ. ಸಂಜೆ ಕಾಲೇಜು ಹೊರತುಪಡಿಸಿ) ಅರ್ಹ ವಿದ್ಯಾರ್ಥಿಗಳು, ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕಾಗಿ ತಿಳಿಸಲಾಗಿದೆ.

| ಕ್ರಮ ಸಂಖ್ಯೆ | ಪ್ರವೇಶಾತಿ ಪ್ರಕ್ರಿಯೆಯ ವಿವರ | |
|---|---|---|
| 1. | ಅರ್ಜಿ ಪಡೆಯುವಿಕೆ ಮತ್ತು ಸಲ್ಲಿಕೆ (3ನೇ ಮತ್ತು 5ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ) | 2017–18ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯ ಪಡೆದಿದ್ದ ವಿದ್ಯಾರ್ಥಿಗಳು, ಅದೇ ವಿದ್ಯಾರ್ಥಿನಿಲಯಗಳಲ್ಲಿ ಅರ್ಜಿಗಳನ್ನು ದಿ. **18–06–2018** ರಿಂದ **23–06–2018** ರವರೆಗೆ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ದಿ. **25–06–2018**ರೊಳಗೆ ಅಲ್ಲಿಯೇ ಸಲ್ಲಿಸುವುದು (ಯು.ಜಿ. ವಿದ್ಯಾರ್ಥಿಗ್ರಾಮ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಅಥವಾ ಗೌತಮ ವಿದ್ಯಾರ್ಥಿನಿಲಯದಲ್ಲಿ ಅರ್ಜಿಗಳನ್ನು ಪಡೆದು, ಸಲ್ಲಿಸುವುದು). 3ನೇ ಮತ್ತು 5ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ದಿ. **29–06–2018** ಹಾಗೂ **30–06–2018**ರಂದು ಪ್ರವೇಶಾತಿಯನ್ನು ನೀಡಲಾಗುವುದು. |
| 2. | ಅರ್ಜಿ ಪಡೆಯುವಿಕೆ ಮತ್ತು ಸಲ್ಲಿಕೆ (1ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ) | 1. **ಸ್ನಾತಕಪೂರ್ವ ಪುರುಷರ ವಿದ್ಯಾರ್ಥಿನಿಲಯಗಳಿಗೆ** ಪ್ರವೇಶಾತಿಯನ್ನು ಬಯಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ದಿ. **18–06–2018** ರಿಂದ **23–06–2018** ರವರೆಗೆ ರಾಮಸ್ವಾಮಿ ಸರ್ಕಲ್ ಬಳಿ ಇರುವ ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಲ್ಲಿಯೇ ದಿ. **25–06–2018** ರೊಳಗೆ ಸಲ್ಲಿಸುವುದು. ಆಯ್ಕೆ ಪಟ್ಟಿಯನ್ನು ದಿ. **02–07–2018** ರಂದು ಸದರಿ ವಿದ್ಯಾರ್ಥಿನಿಲಯದ ಸೂಚನಾ ಫಲಕದಲ್ಲಿ ಬಿತ್ತರಿಸಲಾಗುವುದು. 1ನೇ ಸೆಮಿಸ್ಟರ್‌ನ ಪುರುಷ ವಿದ್ಯಾರ್ಥಿಗಳಿಗೆ ದಿ. **02–07–2018** ರಿಂದ **07–07–2018** ರವರೆಗೆ ಪ್ರವೇಶಾತಿಯನ್ನು ನೀಡಲಾಗುವುದು.<br><br>2. **ಸ್ನಾತಕಪೂರ್ವ ಮಹಿಳಾ ವಿದ್ಯಾರ್ಥಿನಿಲಯಗಳಿಗೆ** ಪ್ರವೇಶಾತಿಯನ್ನು ಬಯಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ದಿ. **18–06–2018** ರಿಂದ **23–06–2018** ರವರೆಗೆ ಪಂಪಾಪತಿ ರಸ್ತೆಯಲ್ಲಿನ (ವಿ.ವಿ. ಸ್ಪೋರ್ಟ್ಸ್ ಪೆವಿಲಿಯನ್ ಹಿಂಭಾಗದ ರೈಲ್ವೇ ಗೇಟಿನ ಬಳಿ) ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಲ್ಲಿಯೇ ದಿ. **25–06–2018** ರೊಳಗೆ ಸಲ್ಲಿಸುವುದು. ಆಯ್ಕೆ ಪಟ್ಟಿಯನ್ನು ದಿ. **02/07/2018** ರಂದು ಸದರಿ ವಿದ್ಯಾರ್ಥಿನಿಲಯದ ಸೂಚನಾ ಫಲಕದಲ್ಲಿ ಬಿತ್ತರಿಸಲಾಗುವುದು. 1ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿಯರಿಗೆ ದಿ. **02–07–2018** ರಿಂದ **07–07–2018** ರವರೆಗೆ ಪ್ರವೇಶಾತಿಯನ್ನು ನೀಡಲಾಗುವುದು. |

13/06/2018

ನಿರ್ದೇಶಕ
DIRECTOR OF STUDENT WELFARE
UNIVERSITY OF MYSORE, MYSURU